**<u>ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾ.ದಃ ನ್ಯಾಯಾಲಯಃ ಶೃಂಗೇರಿ</u>**

**<u>ಸಿ.ಸಿ ಸಂಖ್ಯೆ :: 270/2022</u>**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ಸುಬ್ರಮಣ್ಯ | **PW**-03 |
| **ತಂದೆಯ ಹೆಸರು** | : | ವಿಠಲ ಶೆಟ್ಟಿ | **CW**-03 |
| **ವಯಸ್ಸು** | : | 46 | |
| **ಉದ್ಯೋಗ** | : | ಹೋಟೇಲ್ ನಲ್ಲಿ ಕೆಲಸ. | |
| **ವಾಸಸ್ಥಳ** | : | ಶೃಂಗೇರಿ . | |

**ದಿನಾಂಕಃ23-01-2026 ರಂದು ಪ್ರಮಾಣವಚನ ಬೋಧಿಸಲಾಯಿತು.**

**<u>:: ಮುಖ್ಯ ವಿಚಾರಣೆ :: A.P.P ರವರಿಂದ ::</u>**

1. ನನಗೆ ಈ ಪ್ರಕರಣದಲ್ಲಿ ಯಾವುದೇ ವಿಚಾರ ತಿಳಿದಿರುವುದಿಲ್ಲ. ನಾನು ಒಂದು ದಾಖಲೆಗೆ ಪೋಲೀಸರು ಹೇಳಿದ್ದರಿಂದ 2018 ರಲ್ಲಿ ಸಹಿಯನ್ನು ಮಾಡಿರುತ್ತೇನೆ, ನಿರ್ದಿಷ್ಟವಾಗಿ ಯಾವ ದಿನಾಂಕ ನೆನಪಿಲ್ಲ. ಸಾಕ್ಷಿಯು ಮುಂದುವರಿದು, ನನಗೆ ಆ ದಾಖಲೆಯಲ್ಲಿ ಏನು ವಿಚಾರ ಬರೆದಿದೆ ಎಂದು ತಿಳಿದಿರುವುದಿಲ್ಲ ಎಂದು ನುಡಿಯುತ್ತಾರೆ. ಆ ಸಂದರ್ಭದಲ್ಲಿ ಚಾಸಾ-2 ರವರು ಸಹ ಹಾಜರಾಗಿ ಸಹಿ ಮಾಡಿದ್ದರು ಎಂದು ನುಡಿಯುತ್ತಾರೆ. ಸದರಿ ಸ್ಥಳವನ್ನು ಚಾಸಾ-4 ರವರು ತೋರಿಸಿದರು ಎಂದರೆ ಸರಿ. ನಾನು ಈ ಪ್ರಕರಣದಲ್ಲಿ ಪೋಲೀಸರಿಗೆ ಹೇಳಿಕೆಯನ್ನು ನೀಡಿರುವುದಿಲ್ಲ.

(ಈ ಹಂತದಲ್ಲಿ ಎ.ಪಿ.ಪಿ. ಯವರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ ಅಂತೆಯೇ ಪರಿಗಣಿಸಿ ಅನುಮತಿ ನೀಡಲಾಯಿತು).

**<u>::ಪಾಟೀಸವಾಲು :: A.P.P ರವರಿಂದ ::</u>**

ದಿಃ07-02-2018 ರಂದು ನಾನು ಸ್ಥಳ ಮಹಜರ್ ದಾಖಲೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ಸಾಕ್ಷಿಗೆ ಮೂಲ ದಾಖಲೆಯಲ್ಲಿರುವ ಸ್ಥಳ ಮಹಜರ್ ಅನ್ನು ತೋರಿಸಿ ಅದರಲ್ಲಿರುವ ಸಹಿಯ ಬಗ್ಗೆ ಕೇಳಲಾಗಿ ಸಾಕ್ಷಿಯು ಸದರಿ ಸಹಿಯನ್ನು ನೋಡಿ ಒಪ್ಪಿರುತ್ತಾರೆ. ಸದರಿ ಸಹಿ ಈಗಾಗಲೇ ನಿಪಿ-3(ಎ) ಎಂದು ಗುರುತಿಸಲಾಗಿರುತ್ತದೆ. ನನಗೆ ಸದರಿ ಮೂಲ ಕಡತದಲ್ಲಿರುವ ಈಗಾಗಲೇ ನಿಶಾನೆ ಗೊಂಡಿರುವ ನಿಪಿ-3 ರಲ್ಲಿ ಏನು ವಿಚಾರ ಬರೆದಿದೆ ಎಂದು ನನಗೆ ತಿಳಿದಿರುವುದಿಲ್ಲ. ಈ ಪ್ರಕರಣದ ಕಡತದಲ್ಲಿರುವ

ಧೃಡೀಕೃತ ಸ್ಥಳ ಮಹಜರ್ ಅನ್ನು ನಿಪಿ -2 ಎಂದು ಈಗಾಗಲೇ ನಿಶಾನೆ ಗೊಳಿಸಲಾಗಿರುತ್ತದೆ. ಈ ಪ್ರಕರಣದ ನಿಪಿ-2 ರ ಸ್ಥಳ ಮಹಜರ್ ಅನ್ನು ಪೋಲೀಸರು ಸ್ಥಳದಲ್ಲಿಯೇ ಸಂಜೆ ದಿಃ07-02-2018 ರಂದು ಸಂಜೆ 6.15 ರಿಂದ 7.00 ಗಂಟೆಯವರೆಗೂ ಬರೆದುಕೊಂಡರು ಎಂದರೆ ಸರಿ.

**:: ಪಾಟೀ ಸವಾಲು :: ಆರೋಪಿ ಪರ ಶ್ರೀ.K.C.C ವಕೀಲರಿಂದ ::**

ಶುಭೋದಯ ಲಾಡ್ಜ್ ನ ಅಕ್ಕ-ಪಕ್ಕ ನರ್ತಕಿ ಬಾರ್ ಮತ್ತು ಹೋಟೇಲ್ ಮತ್ತು ಎದುರುಗಡೆ ಪೆಟ್ರೋಲ್ ಬಂಕ್ ಇದೆ ಎಂದರೆ ಸರಿ. ಸದರಿ ಸ್ಥಳವು ಜನ ನಿಬಿಡ ಸ್ಥಳ ಆಗಿರುತ್ತದೆ ಎಂದರೆ ಸರಿ. ಚಾಸಾ-1 ಶುಭೋದಯ ಲಾಡ್ಜ್ ಮತ್ತು ನಾನು ನಡೆಸುತ್ತಿರುವ ಹೋಟೇಲ್ ಕಟ್ಟಡದ ಮಾಲೀಕರು ಚಾಸಾ-1 ಆಗಿರುತ್ತಾರೆ ಎಂದರೆ ಸರಿ. ಚಾಸಾ-1 ರವರು ಹೇಳಿದ್ದರಿಂದ ನಾನು ಸ್ಥಳ ಮಹಜರ್ ಗೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ಸದರಿ ಸ್ಥಳ ಮಹಜರ್ ನಲ್ಲಿ ಏನು ವಿಚಾರ ಬರೆದಿರುತ್ತದೆ ಎಂದು ನನಗೆ ತಿಳಿದಿರುವುದಿಲ್ಲ ಎಂದರೆ ಸರಿ. ಈ ಹಿಂದೆ ಸಿ.ಸಿ ನಂಬರ್ 238/2018 ರಲ್ಲಿ ನೀಡಿದ ಸಾಕ್ಷ್ಯ ಸತ್ಯವಾಗಿ ನೀಡಿರುತ್ತೇನೆ ಎಂದರೆ ಸರಿ.

**:: ಮರುವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ::

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,

ಶೃಂಗೇರಿ.